MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | THURSDAY | 14-7-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಶ್ರೀಕಾಕುಲಂನ ಗೋಡಂಬಿ ಉದ್ಯಮ ಸಂಕಷ್ಟದಲ್ಲಿ

ಈ ವರ್ಷ ಹವಾಮಾನ ವೈಪರೀತ್ಯದಿಂದ ಶ್ರೀಕಾಕುಲಂ ಹಾಗೂ ದೇಶದಲ್ಲಿ ಕಚ್ಚಾ ಗೋಡಂಬಿ ಉತ್ಪಾದನೆ ಇಳಿಕೆಯಾಗಿತ್ತು. ಶ್ರೀಕಾಕುಲಂ ಜಿಲ್ಲೆಯ ಗೋಡಂಬಿ ಉದ್ಯಮಿಗಳು ದೇಶೀ ಕಚ್ಚಾ ಗೋಡಂಬಿ ಉತ್ಪಾದನೆ ಇಳಿಕೆಯಿಂದ ಹೆಚ್ಚಿನ ಗೋಡಂಬಿ ತಿರುಳು ಉತ್ಪಾದನೆಗಾಗಿ ಆಮದು ಕಚ್ಚಾ ಗೋಡಂಬಿಯನ್ನು ಅವಲಂಬಿಸಬೇಕಾಗಿ ಬಂದು ಕಚ್ಚಾ ಗೋಡಂಬಿ ಆಮದು ಮಾಡಿ ಗೋಡಂಬಿ ತಿರುಳು ಉತ್ಪಾದಿಸಿದ್ದು ಈಗ ಬೇಡಿಕೆ ಕಡಿಮೆಯಾಗಿದೆಯೆನ್ನಲಾಗಿದೆ. ಪ್ರತಿ ವರ್ಷ ವಿಯೆಟ್ನಾಂನಿಂದ ಬೇಡಿಕೆ ಬಂದು ರಫ್ತಾಗುತ್ತಿತ್ತೆನ್ನಲಾಗಿದೆ. ಈ ವರ್ಷ ಬೇಡಿಕೆ ಬರದೆ ವಿಯೆಟ್ನಾಂನಿಂದ ಖರೀದಿಯಾಗಿಲ್ಲವೆನ್ನಲಾಗಿದ್ದು, ಗೋಡಂಬಿ ತಿರುಳು ಮಾರಲು ಶ್ರಮ ಪಡುತ್ತಿದ್ದಾರೆನ್ನಲಾಗಿದೆ. ಮುಂದಿನ ದಿನಗಳಲ್ಲಿ ಬೇಡಿಕೆ ಹೆಚ್ಚಳವಾಗುವ ನಿರೀಕ್ಷೆಯಿಂದ ಕಾಯುತ್ತಿದ್ದಾರೆನ್ನಲಾಗಿದೆ.

## ಜೂನ್ ತಿಂಗಳಲ್ಲಿ ಭಾರತದ ಖಾದ್ಯತೈಲ ಆಮದು ಹಿಂದಿನ ವರ್ಷದ ಜೂನ್ ತಿಂಗಳಿಂದ ಕಡಿಮೆ

2021 ರ ಜೂನ್ ತಿಂಗಳಲ್ಲಿ ಭಾರತ 996014 ಟನ್ ಸಸ್ಯಜನ್ಯ ತೈಲ ಆಮದು ಮಾಡಿದ್ದು ಈ ವರ್ಷ ಜೂನ್‌ನಲ್ಲಿ 991650 ಟನ್ ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ. ಇದರಲ್ಲಿ 941,471 ಟನ್‌ಗಳು ಖಾದ್ಯ ಹಾಗೂ 50179 ಟನ್‌ಗಳು ಖಾದ್ಯವಲ್ಲದ ತೈಲವಾಗಿದೆಯೆನ್ನಲಾಗಿದೆ. ಇಂಡೋನೇಶೀಯಾದ ರಫ್ತು 10 ವರ್ಷಗಳ ಕನಿಷ್ಠ ಮಟ್ಟಕ್ಕಿಳಿದಿದ್ದು, ದಾಸ್ತಾನು ಬಹಳ ಹೆಚ್ಚಳವಾಗಿದೆಯೆನ್ನಲಾಗಿದೆ. ದಾಸ್ತಾನು 8.5 ಮಿಲಿಯನ್ ಟನ್‌ಗಳಿಗೆ ಹೆಚ್ಚಳವಾಗಿದೆಯೆಂದು ಕೆಲವು ವಿಶ್ಲೇಷಕರ ಅಭಿಪ್ರಾಯವಾಗಿದೆ. ಈ ವರ್ಷ ಜೂನ್‌ನಲ್ಲಿ ಭಾರತದ ಕಚ್ಚಾ ಪಾಮೆಣ್ಣೆ (CPO) 12% ಶೇಕಡಾ ಇಳಿಕೆಯಾಗಿ 5.07 ಲಕ್ಷ ಟನ್‌ಗಳಾಗಿವೆಯೆನ್ನಲಾಗಿದೆ. ಹಿಂದಿನ ವರ್ಷದ ಜೂನ್‌ನಲ್ಲಿ 5.76 ಲಕ್ಷ ಟನ್ ಕಚ್ಚಾ ಪಾಂಎಣ್ಣೆ ಆಮದಾಗಿತ್ತೆನ್ನಲಾಗಿದೆ. ಆದರೆ ರಿಫೈಂಡ್ (RBD) ಪಾಮೆಣ್ಣೆ ಆಮದು ತೀವ್ರ(24 ಶೇಕಡಾ) ಹೆಚ್ಚಳ ಕಂಡು ಹಿಂದಿನ ವರ್ಷದ 3200 ಟನ್‌ಗಳಿಂದ 79264 ಟನ್‌ಗಳಿಗೇರಿದೆ. ಸೋಯಾಬೀನ್ ಎಣ್ಣೆ ಆಮದು ಹಿಂದಿನ ವರ್ಷದ 2.06 ಲಕ್ಷ ಟನ್‌ಗಳಿಂದ 12 ಶೇಕಡಾ ಹೆಚ್ಚಳವಾಗಿ 2.30 ಲಕ್ಷ ಟನ್‌ಗಳಾಗಿವೆ. ಸೂರ್ಯಕಾಂತಿ ಎಣ್ಣೆ ಆಮದು 1.75 ಲಕ್ಷ ಟನ್‌ಗಳಿಂದ ತೀವ್ರ (32 ಶೇಕಡಾ) ಇಳಿಕೆಯಾಗಿ 1.19 ಲಕ್ಷ ಟನ್‌ಗಳಾಗಿವೆ. SEA ಪ್ರಕಾರ ಜುಲೈ ಆರಂಭದಲ್ಲಿ ದೇಶದ ಖಾದ್ಯತೈಲ ದಾಸ್ತಾನು 6 ಲಕ್ಷ ಟನ್ ಹಾಗೂ ಪೈಪ್‌ಲೈನ್‌ನಲ್ಲಿ 16.56 ಲಕ್ಷ ಟನ್‌ಗಳಿವೆಯೆಂದು ಅಂದಾಜಿಸಲಾಗಿದೆ. 2021–22 ನವೆಂಬರ್‌ನಿಂದ ಜೂನ್ ಅವಧಿಯಲ್ಲಿ ಭಾರತದ ಸಸ್ಯಜನ್ಯ ತೈಲ ಆಮದು ಹಿಂದಿನ ವರ್ಷದ ಈ ಅವಧಿಯಲ್ಲಿದ್ದ 86.74 ಲಕ್ಷದಿಂದ 87.60 ಲಕ್ಷಗಳಿಗೇರಿದೆ.

## ಜೋಳ ದರ ಸ್ಥಿರ ಹಾಗೂ ದುರ್ಬಲ

ಬಿಹಾರದಲ್ಲಿ ಉತ್ತಮ ಬೇಡಿಕೆಯಿಂದ ಜೋಳ ದರ ಸ್ಥಿರವಿದ್ದು, ಕರ್ನಾಟಕದ ದಾವಣಗೆರೆಯಲ್ಲಿ ಬೇಡಿಕೆ ಇಳಿಕೆಯಿಂದಾಗಿ ದರ ದುರ್ಬಲಗೊಂಡಿದೆಯೆನ್ನಲಾಗಿದೆ. ಗೋಧಿ ದರ ಸ್ಥಿರವಿದ್ದು, ಮುಂದಿನ ದಿನಗಳಲ್ಲಿ ಆವಕ ಇಳಿಕೆಯಾಗುವ ನಿರೀಕ್ಷೆಯಿದೆಯೆನ್ನಲಾಗಿದೆ.